ಕರ್ನಾಟಕ ವಿಧಾನ ಸಭೆ

400 ಶ್ರೀ ನೆ.ಲ.ನರೇಂದ್ರಬಾಬು

ಅ) ರಾಜ್ಯದಲ್ಲಿ ಯಶಸ್ವಿನಿ ಯೋಜನೆ ಯಾವಾಗಿನಿಂದ ಪ್ರಾರಂಭವಾಯಿತು, ಈ ಯೋಜನೆಯ ರೂಪು– ರೇಷೆಗಳು ಯಾವುವು?

ರಾಜ್ಯದಲ್ಲಿ ಯಶಸ್ವಿನಿ ಯೋಜನೆಯು ದಿನಾಂಕ: 01.06.2003 ರಂದು ಪ್ರಾರಂಭವಾಯಿತು. ಈ ಯೋಜನೆಯ ರೂಪುರೇಷೆಗಳನ್ನು ಒಳಗೊಂಡ ಕರಪತ್ರವನ್ನು ಲಗತ್ತಿಸಿದೆ.

ಆ) ಈ ಯೋಜನೆಗೆ ಒಳಪಡಲು ಬೇಕಾಗಿರುವ ಮಾನದಂಡಗಳು ಯಾವುವು?

ಈ ಯೋಜನೆಗೆ ಒಳಪಡಲು ಬೇಕಾಗಿರುವ ಮಾನದಂಡಗಳು ಈ ಕೆಳಗೆ ನಮೂದಿಸಿದಂತೆ ಇರುತ್ತವೆ.

1) ಗ್ರಾಮೀಣ ಸಹಕಾರ ಸಂಘದ ಸದಸ್ಯನಾಗಿ ಆರು ತಿಂಗಳಾಗಿರಬೇಕು.

2) ಸಹಕಾರ ಸಂಘ ಅಥವಾ ಸಹಕಾರ ಬ್ಯಾಂಕಿನೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಪ್ರದೇಶದ ಯಾವುದೇ ಸ್ವಸಹಾಯ ಗುಂಪು ಅಥವಾ ಸ್ತ್ರೀ ಶಕ್ತಿ ಗುಂಪಿನ ಸದಸ್ಯರಾಗಿರಬೇಕು.

3) ಮೀನುಗಾರ ಸಹಕಾರ ಸಂಘ ಅಥವಾ ನೇಕಾರರ ಸಹಕಾರ ಸಂಘ ಅಥವಾ ಬೀಡಿಕಾರ್ಮಿಕರ ಸಹಕಾರ ಸಂಘದ ಸದಸ್ಯನಾಗಿ ಆರು ತಿಂಗಳಾಗಿರಬೇಕು.

4) 75 ವರ್ಷ ವಯಸ್ಸು ಮೀರಿರಬಾರದು.

5) ಗರ್ಭಕೋಶ ಶಸ್ತ್ರಚಿಕಿತ್ಸೆ ಪಡೆಯಲು 50 ವರ್ಷ ಮೀರಿರಬೇಕು.

ಇ) 2008 ರವರೆಗೆ ಎಷ್ಟು ಫಲಾನುಭವಿಗಳಿಗೆ ಯಶಸ್ವಿನಿ ಕಾರ್ಡುಗಳನ್ನು ವಿತರಿಸಲಾಗಿದೆ. ಇದರಿಂದ ಉಪಯೋಗ ಪಡೆದವರ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)?

2008–09 ಸಾಲಿನಲ್ಲಿ 30.45 ಲಕ್ಷ ಯಶಸ್ವಿನಿ ಫಲಾನುಭವಿಗಳನ್ನು ನೋಂದಾಯಿಸಿದ್ದು ಅವರ ಪ್ರತಿ ಕುಟುಂಬಕ್ಕೆ ಯುನಿಕ್ ಐಡಿ ಸಂಖ್ಯೆಯನ್ನು ಕೊಡಲಾಗಿದೆ. ಅವರಿಗೆ ಯಶಸ್ವಿನಿ ವಂತಿಗೆ ಹಣ ಸಂದಾಯ ಮಾಡಿದ ಬಗ್ಗೆ ಕೊಡಲಾದ ಪಾವತಿಯೇ ಕಾರ್ಡು ಕೂಡ ಆಗಿರುತ್ತದೆ. ಆದ್ದರಿಂದ, ಎಲ್ಲಾ ಫಲಾನುಭವಿಗಳಿಗೆ ಕಾರ್ಡುಗಳನ್ನು ವಿತರಿಸಿದಂತೆ ಆಗಿದೆ.

2008–09ನೇ ಸಾಲಿನಲ್ಲಿ ದಿನಾಂಕ: 11.02.2009 ಕ್ಕೆ ಇರುವಂತೆ 1,47,394 ಫಲಾನುಭವಿಗಳು, ಉಚಿತ ಹೊರರೋಗ ಚಿಕಿತ್ಸೆಯ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ ಮತ್ತು 51,717 ಫಲಾನುಭವಿಗಳು ಶಸ್ತ್ರಚಿಕಿತ್ಸೆ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ. ಉಪಯೋಗ ಪಡೆದವರ ವಿಧಾನ ಸಭಾ ಕ್ಷೇತ್ರವಾರು

ವಿವರ ಲಭ್ಯ ಇರುವುದಿಲ್ಲ. ಆದಾಗ್ಯೂ, ಜಿಲ್ಲಾವಾರು ವಿವರ ಲಭ್ಯ ಇದ್ದು ಲಗತ್ತಿಸಿದೆ. (ಪುಟ–2)

ಸಿ.ಓ 39 ಸಿ.ಎಲ್.ಎಸ್ 2009

ಸಹಿ/–
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

Yeshasvini Co-operative Farmers Health Care Scheme				
District wise OPD and Surgeries				
Sl.No	**Division**	**District**	**OPD**	**Surgeries**
1	**Belgaum**	Belgaum	9076	3238
		Bijapur	3424	1684
		Bagalkot	10426	2557
		Dharwad	10625	4745
		Gadag	2097	440
		Haveri	7495	1499
		U.K	2319	903
Sub Total			**45462**	**15066**
2	**Gulbarga**	Bellary	604	178
		Bidar	918	451
		Gulbarga	2578	1682
		Koppal	333	118
		Raichur	3851	962
Sub Total			**8284**	**3391**
3	**Bangalore**	Bangalore-U(I)	39372	9882
		Bangalore-U(II)		
		Bangalore-R		
		Ramanagar		
		Chitradurga	3576	1328
		Davangere	9416	4077
		Kolar		
		Chikkaballapura	2313	1368

		Shimoga	6805	1124
		Tumkur	3235	2169
Sub Total			**64717**	**19948**
4	**Mysore**	Mysore	4348	2550
		Chamarajnagar	1323	394
		Mandya	10509	4430
		Hassan	4004	2141
		Chikmagalur	2731	738
		Kodagu	495	133
		D.K.	3275	1142
		Udupi	2246	1784
Sub Total			**28931**	**13312**
Grand Total			**147394**	**51717**

CO 39 CLS 2009

ಯಶಸ್ವಿನಿ
ಗ್ರಾಮೀಣ ಸಹಕಾರಿಗಳ ಆರೋಗ್ಯ
ನಾಡಿನ ಭಾಗ್ಯ

ಗ್ರಾಮೀಣ ಸಹಕಾರಿಗಳಿಗಾಗಿ ಸಹಕಾರ ಇಲಾಖೆಯ
ಮೂಲಕ ಕರ್ನಾಟಕ ಸರಕಾರ
ಅರ್ಪಿಸುತ್ತಿರುವ ದೇಶದ ಮೊಟ್ಟ ಮೊದಲ
'ಗ್ರಾಮೀಣ ಸಹಕಾರಿಗಳ ಆರೋಗ್ಯ ಯೋಜನೆ'

"ಯಶಸ್ವಿನಿ ಅಂದರೆ ರಾಜ್ಯದ
ಗ್ರಾಮೀಣ ಸಹಕಾರಿಗಳ
ಆರೋಗ್ಯ ಲಕ್ಷ್ಮಿ"

ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ

ಶ್ರೀ ಬಿ.ಎಸ್.ಯಡಿಯೂರಪ್ಪನವರು
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಪ್ರಧಾನ ಪೋಷಕರು
ಯಶಸ್ವಿನಿ ಟ್ರಸ್ಟ್

ಶ್ರೀ ಲಕ್ಷ್ಮಣ ಸವದಿ
ಸನ್ಮಾನ್ಯ ಸಹಕಾರ ಮಂತ್ರಿಗಳು
ಕರ್ನಾಟಕ ಸರ್ಕಾರ
ಪೋಷಕರು
ಯಶಸ್ವಿನಿ ಟ್ರಸ್ಟ್

1. ಯಶಸ್ವಿನಿ ಯೋಜನೆ ಅಂದರೇನು?

ಯಶಸ್ವಿನಿ ಗ್ರಾಮೀಣ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ. ಕರ್ನಾಟಕ ರಾಜ್ಯದ ಗ್ರಾಮೀಣ ಸಹಕಾರಿಗಳಿಗಾಗಿಯೇ ರೂಪಗೊಂಡಿರುವ ಒಂದು ಸ್ವಯಂ-ನಿಧಿ ಶಸ್ತ್ರಚಿಕಿತ್ಸಾ ಯೋಜನೆ. ಈ ಯೋಜನೆಯಡಿ ಸಹಕಾರಿ ಗ್ರಾಮೀಣ ಸಹಕಾರಿಯೊಬ್ಬ ತಿಂಗಳಿಗೆ ಇಂತಿಷ್ಟರಂತೆ ನಿಗದಿತ ಪ್ರಮಾಣದಲ್ಲಿ ಒಂದು ವರ್ಷಕ್ಕೆ ವಂತಿಗೆ ನೀಡಿ. ಆ ಒಂದು ವರ್ಷದ ಅವಧಿಯಲ್ಲಿ ಯೋಜನೆಯಲ್ಲಿ ಒಳಗೊಂಡ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ನಿಗದಿತ ಮಿತಿಯೊಳಗೆ, ಅಂದರೆ, ಒಂದೇ ಶಸ್ತ್ರಚಿಕಿತ್ಸೆಯಾದಲ್ಲಿ ಗರಿಷ್ಠ ರೂ. 1.00 ಲಕ್ಷದವರೆಗೆ ಮತ್ತು ಒಂದಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆಗಳಾಗಿದ್ದಲ್ಲಿ ಗರಿಷ್ಠ ರೂ. 2.00 ಲಕ್ಷದವರೆಗೆ ರಾಜ್ಯದ ಅಂಗೀಕೃತ ಆಸ್ಪತ್ರೆಗಳಲ್ಲಿ ಉಚಿತವಾಗಿ ಪಡೆಯಬಹುದು.

2. ಈ ಯೋಜನೆಯ ಅವಧಿ ಎಷ್ಟು?

ಈ ಯೋಜನೆಯಲ್ಲಿ ಪ್ರತಿ ನೋಂದಣಿಯ ಅವಧಿ ಒಂದು ವರ್ಷ. ಜೂನ್ 1 ರಿಂದ ಪ್ರಾರಂಭವಾಗಿ ಮೇ 31 ರಂದು ಮುಕ್ತಾಯಗೊಳ್ಳುತ್ತದೆ.

3. ಯಶಸ್ವಿನಿ ಯೋಜನೆಯ ವಿಮಾ ಯೋಜನೆಯೇ?

ಇಲ್ಲ, ಇದು ಒಂದು ಸ್ವಯಂನಿಧಿ ಶಸ್ತ್ರಚಿಕಿತ್ಸಾ ಯೋಜನೆ.

4. ಯೋಜನೆಯ ವೈಶಿಷ್ಟ್ಯವೇನು?

ವಿಮಾ ಸಂಸ್ಥೆಗಳ ಯೋಜನೆಗಳಲ್ಲಿ ನೋಂದಣಿಗೆ ಮುಂಚೆ ಇರುವಂತಹ ರೋಗಗಳಿಗೆ ವಿಮಾ ರಕ್ಷಣೆ ಇರುವುದಿಲ್ಲ. ಆದರೆ ಯಶಸ್ವಿನಿ ಯೋಜನೆಯಡಿ ನೋಂದಣಿಗೆ ಮುಂಚೆ ಇರಬಹುದಾದಂತಹ ರೋಗಗಳಿಗೂ ಶಸ್ತ್ರಚಿಕಿತ್ಸಾ ಸೌಲಭ್ಯ ಲಭ್ಯವಿರುತ್ತದೆ. ಅಲ್ಲದೇ, ಎಲ್ಲಾ ಜಿಲ್ಲೆಗಳಲ್ಲೂ ಕೇಂದ್ರೀಕೃತವಾದ ನೋಂದಣಿ ಕೈಗೊಳ್ಳಲಾಗಿದ್ದು, ನೋಂದಾಯಿತ ಗ್ರಾಮೀಣ ಸಹಕಾರಿಗಳಿಗೆ ಕಂಪ್ಯೂಟರೀಕೃತ ಗುರುತಿನ ಚೀಟಿಯನ್ನು ನೀಡಲಾಗುವುದು.

5. ಈ ಯೋಜನೆಗೆ ಸರ್ಕಾರದ ಸಹಕಾರ ಇದೆಯೇ?

ಇದೆ, ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯೇ ಈ ಯೋಜನೆಯ ರೂವಾರಿ.

6. ಈ ಯೋಜನೆಯಿಂದ ಗ್ರಾಮೀಣ ಸಹಕಾರಿಗಳಿಗೇನು ಪ್ರಯೋಜನ?

ನಿಗದಿತ ಪ್ರಮಾಣದಲ್ಲಿ ಒಂದು ವರ್ಷಕ್ಕೆ ವಂತಿಕೆ ನೀಡಿದ ಗ್ರಾಮೀಣ ಸಹಕಾರಿ, ಆ ಒಂದು ವರ್ಷದಲ್ಲಿ ಅಗತ್ಯವಾಗ ಬಹುದಾದಂತಹ ಯಾವುದೇ ಶಸ್ತ್ರಚಿಕಿತ್ಸೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಉಚಿತವಾಗಿ ಮೇಲೆ ತಿಳಿಸಿದ ನಿಗದಿತ ಮಿತಿಯೊಳಗೆ ಪಡೆಯಬಹುದಾಗಿದೆ. ಹಾಗಾಗಿ, ಅವರು ಅನಾರೋಗ್ಯಗೊಂಡು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾದರೆ ಅದಕ್ಕೆ ಆಗುವ ಖರ್ಚಿನ ಬಗ್ಗೆ ನಿಶ್ಚಿಂತೆಯಿಂದಿರಬಹುದು.

7. ಯೋಜನೆಯ ಸೌಲಭ್ಯ ಪಡೆಯಲು ವಯೋಮಿತಿ ನಿಗದಿ ಪಡಿಸಲಾಗಿದೆಯೆ?

ಹೌದು, ಯೋಜನೆಯ ಸೌಲಭ್ಯವನ್ನು 75 ವರ್ಷಗಳವರೆಗೆ ಪಡೆಯಬಹುದು. ಗರ್ಭಕೋಶ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು 50 ವರ್ಷ ಮೀರಿದ ಹೆಣ್ಣು–ಮಕ್ಕಳು ಮಾತ್ರ ಪಡೆಯಬಹುದು. ಕೆಲವೊಂದು ಸಂದರ್ಭಗಳಲ್ಲಿ 50 ವರ್ಷದೊಳಗಿನವರೂ ಸೌಲಭ್ಯ ಪಡೆಯಬಹುದು.

8. ಈವರೆಗಿನ 1600 ಶಸ್ತ್ರಚಿಕಿತ್ಸೆಗಳಲ್ಲದೆ ಒದಗಿಸಲಾದ ಹೆಚ್ಚುವರಿ ಸೌಲಭ್ಯಗಳಾವುವು?

ಈವರೆಗಿನ ಮೂಳೆ, ನೇತ್ರ, ಉದರ, ಕಿವಿ, ಮೂಗು, ನರ, ಗಂಟಲು, ಮೂತ್ರಪಿಂಡ, ಹೃದಯ ಇವುಗಳಿಗೆ ಸಂಬಂಧಿಸಿದಂತೆ ಗುರುತಿಸಿದ 1600 ಶಸ್ತ್ರ ಚಿಕಿತ್ಸೆಗಳಲ್ಲದೆ ಈ ಕೆಳಗಿನ ಹೆಚ್ಚುವರಿ ಸೌಲಭ್ಯಗಳು ಲಭ್ಯವಾಗಿರುತ್ತವೆ.

1. ಸಾಮಾನ್ಯ ಹೆರಿಗೆ*
2. ನವಜಾತ ಶಿಶುವಿನ ಶುಶ್ರೂಷೆ*
3. ಕೃಷಿ ಉಪಕರಣಗಳಿಂದ ಆಗುವ ಅಪಘಾತಗಳು*
4. ನೀರಿನಲ್ಲಿ ಮುಳುಗುವುದು*
5. ನಾಯಿ ಕಡಿತ*
6. ಹಾವು ಕಡಿತ*
7. ಹೋರಿ ಇರಿತ*
8. ವಿದ್ಯುತ್ ಆಘಾತ*
9. ಅಲ್ಲದೆ ದಿನಾಂಕ 01–07–06 ರಿಂದ ಆ್ಯಂಜಿಯೋಪ್ಲಾಸ್ಟಿ ಪ್ರೋಸೀಜರ್ ಸೌಲಭ್ಯ ಕೂಡ ಲಭ್ಯವಿರುತ್ತದೆ.

* ಷರತ್ತುಗಳಿಗೆ ಒಳಪಟ್ಟಿರುತ್ತದೆ.

9. 2007–08ನೇ ಸಾಲಿನಿಂದ ಒದಗಿಸಲಾದ ಹೆಚ್ಚುವರಿ ಸೌಲಭ್ಯಗಳಾವುವು?

1. ಒಂದೇ ಕುಟುಂಬದ 5 ಅಥವಾ 5 ಕ್ಕಿಂತ ಹೆಚ್ಚು ಸದಸ್ಯರಿಗೆ ವಂತಿಗೆಯಲ್ಲಿ ಶೇ. 15 ರಿಯಾಯಿತಿ ಇರುತ್ತದೆ.

2. ಕುಟುಂಬದ ಎಲ್ಲಾ ಸದಸ್ಯರಿಗೂ ಯೋಜನೆಯ ಲಾಭ ಲಭ್ಯ.

10. ಈ ಯೋಜನೆಯ ಫಲಾನುಭವಿಯಾಗಲು ಇರಬೇಕಾದ ಅರ್ಹತೆಗಳೇನು?

ಈ ಯೋಜನೆಯ ಫಲಾನುಭವಿಯಾಗಲು ಕನಿಷ್ಠ 6 ತಿಂಗಳು ಗ್ರಾಮೀಣ ಸಹಕಾರ ಸಂಘವೊಂದರ ಸದಸ್ಯರಾಗಿರಬೇಕು. ಗ್ರಾಮೀಣ ಸಹಕಾರಿ ಸದಸ್ಯರ ಪತಿ, ಪತ್ನಿ ಅವಲಂಬಿತ ಮಕ್ಕಳು, ತಂದೆ, ತಾಯಿ (ಹಿಂದೂ ಅವಿಭಾಜ್ಯ ಕುಟುಂಬದ ಸದಸ್ಯರು) ಫಲಾನುಭವಿಯಾಗಲು ಅರ್ಹರು.

11. 2008–09ನೇ ಸಾಲಿನಿಂದ ಯಶಸ್ವಿನಿ ಯೋಜನೆಯು ಈ ಕೆಳಗೆ ನಮೂದಿಸಿದ ಯೋಜನೆಗಳನ್ನು ಸಹ ನಿರ್ವಹಿಸುತ್ತಿದೆ.

11.1 ಸುವರ್ಣ ಆರೋಗ್ಯ ಚೈತನ್ಯ ಯೋಜನೆ

ಈ ಯೋಜನೆಯಡಿಯಲ್ಲಿ 1 ರಿಂದ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಅವಶ್ಯವಿದ್ದ ಶಸ್ತ್ರಚಿಕಿತ್ಸೆ ಮಾಡಲಾಗುವುದು.

11.2 ಹೆಚ್.ಐ.ವಿ. ಸೋಂಕಿಗೆ ತುತ್ತಾಗಿರುವ ಗರ್ಭಿಣಿ ಮಹಿಳೆಯರಿಗೆ ಉಚಿತವಾಗಿ ಹೆರಿಗೆ ಮಾಡಲಾಗುವುದು ಹಾಗೂ ನವ್ರೋಪಿನ್ ಮಾತ್ರೆ ಮತ್ತು ಔಷಧಿಯನ್ನು ತಾಯಿ ಮತ್ತು ಜನಿಸಿದ ಮಗುವಿಗೆ ಉಚಿತವಾಗಿ ನೀಡಲಾಗುವುದು.

12. ಈ ಯೋಜನೆಯಡಿಯಲ್ಲಿ ಒಳಗೊಂಡ ಇತರ ಸೌಲಭ್ಯಗಳು ಯಾವುವು?

ರಾಜ್ಯಾದ್ಯಂತ ಇರುವ ಯಾವುದೇ ಅಂಗೀಕೃತ ಆಸ್ಪತ್ರೆಗಳಲ್ಲಿ ಯಶಸ್ವಿನಿ ಫಲಾನುಭವಿಗಳು ಉಚಿತ ಹೊರರೋಗಿ ಚಿಕಿತ್ಸೆ(ವೈದ್ಯರ ಸಲಹೆ ಮತ್ತು ನೋಂದಣಿ ವೆಚ್ಚ ಸೇರಿರುತ್ತದೆ) ಪಡೆಯಬಹುದು.

ರಿಯಾಯಿತಿ ದರದಲ್ಲಿ ಹೊರ ರೋಗಿ ವೈದ್ಯಕೀಯ ಪರೀಕ್ಷೆ/ ತನಿಖೆಗಳನ್ನು ಪಡೆಯಬಹುದು.

ಯಶಸ್ವಿನಿ ಫಲಾನುಭವಿಗಳು ಆಸ್ಪತ್ರೆಗೆ ಸೇರಿದಾಗ ಆಸ್ಪತ್ರೆಯ ಅಧಿಕಾರಿಗಳು ಶಸ್ತ್ರ ಚಿಕಿತ್ಸೆಗೆ **ಯಶಸ್ವಿನಿ** ಫಲಾನುಭವಿಗಳಿಂದ ಹಣ ಪಡೆಯುವುದಿಲ್ಲ.

ವೈದ್ಯಾಧಿಕಾರಿಯ ಫೀ, ಬೆಡ್ ಚಾರ್ಜು ಔಷಧಿಯ ವೆಚ್ಚ ಮತ್ತು ತನಿಖೆ ಅಥವಾ ಇತರೆ ಸೇವೆಯ ಬಗ್ಗೆ ಆಸ್ಪತ್ರೆ **ಯಶಸ್ವಿನಿ** ಫಲಾನುಭವಿಗಳಿಂದ ಪ್ರತ್ಯೇಕವಾಗಿ ಹಣ ಪಡೆಯತಕ್ಕದ್ದಲ್ಲ. ಶಸ್ತ್ರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿದಾಗಿನಿಂದ ಶಸ್ತ್ರಚಿಕಿತ್ಸೆಗೆ ಮುಗಿದು ಹೊರಗೆ ಬರುವವರೆಗಿನ ಚಿಕಿತ್ಸೆಯ ವೆಚ್ಚವನ್ನು **ಯಶಸ್ವಿನಿ ಟ್ರಸ್ಟ್** ಭರಿಸುತ್ತದೆ.

13. ಈ ಯೋಜನೆಯಲ್ಲಿ ಒಳಗೊಳ್ಳದ ಶಸ್ತ್ರಚಿಕಿತ್ಸೆಗಳು ಮತ್ತು ಅದಕ್ಕೆ ಅವಶ್ಯ ಇರುವ ಉಪಕರಣಗಳು ಯಾವುವು?

ಜಾಯಿಂಟ್ ಬದಲಾವಣೆ, ಸುಟ್ಟ ಗಾಯಗಳು, ರಸ್ತೆ ಅಪಘಾತಗಳು, ಹಲ್ಲಿನ ಶಸ್ತ್ರ ಚಿಕಿತ್ಸೆ, ಚರ್ಮದ ಗ್ರಾಫ್ಟಿಂಗ್, ಕಿಡ್ನಿ ಟ್ರಾನ್ಸ್‌ಪ್ಲಾಂಟ್, ಹಾರ್ಟ್ ಟ್ರಾನ್ಸ್‌ಪ್ಲಾಂಟ್, ಇಂಪ್ಲಾಂಟ್, ಸ್ಟಂಟ್ಸ್ ಇತ್ಯಾದಿ ಈ ಯೋಜನೆಯಲ್ಲಿ ಸೇರಿರುವುದಿಲ್ಲ.

14. ಯೋಜನೆಯ ಸೌಲಭ್ಯವನ್ನು ಎಲ್ಲಿ ಪಡೆಯಬಹುದು?

ಯಶಸ್ವಿನಿ ಯೋಜನೆಯ ಗ್ರಾಮೀಣ ಸಹಕಾರಿಗಳು ಯೋಜನೆಯ ಸೌಲಭ್ಯವನ್ನು ಮುಖ್ಯವಾಗಿ ಆಯಾ ಗ್ರಾಮೀಣ ಸಹಕಾರಿಗಳು ವಾಸಿಸುವ ಜಿಲ್ಲೆಯಲ್ಲಿ ಅಂಗೀಕೃತವಾದ ಆಸ್ಪತ್ರೆಗಳು / ನರ್ಸಿಂಗ್ ಹೋಂಗಳಲ್ಲೇ ಪಡೆಯಬಹುದು ಅಥವಾ ರಾಜ್ಯದಲ್ಲಿ ಅಂಗೀಕೃತವಾದ ಯಾವುದೇ ಆಸ್ಪತ್ರೆಗಳು / ನರ್ಸಿಂಗ್ ಹೋಂನಲ್ಲಿ ಪಡೆಯಬಹುದು.

15. ಶಸ್ತ್ರಚಿಕಿತ್ಸೆಯ ಅವಶ್ಯಕತೆಯಿಲ್ಲದೆ, ಕೇವಲ ವೈದ್ಯಕೀಯ ಚಿಕಿತ್ಸೆ ವೈದ್ಯೋಪಚಾರ ಮಾತ್ರ ಬೇಕಾದಲ್ಲಿ ಏನಾಗುತ್ತದೆ.?

ಕಂಡಿಕೆ 8 ರಲ್ಲಿ ನಮೂದಿಸಿದ ಪ್ರಕಾರ, ಯಶಸ್ವಿನಿ ಕೇವಲ ಶಸ್ತ್ರಚಿಕಿತ್ಸೆಗಳಿಗೆ ಅನ್ವಯವಾಗುವ ಯೋಜನೆ. ಶಸ್ತ್ರಚಿಕಿತ್ಸೆಯ ಅವಶ್ಯವಿಲ್ಲದ ಔಷಧೋಪಚಾರವು (ವೈದ್ಯಕೀಯ ಚಿಕಿತ್ಸೆ) ಯೋಜನೆಯಲ್ಲಿ ಒಳಗೊಂಡಿರುವುದಿಲ್ಲ. ಔಷಧೋಪಚಾರಕ್ಕಾಗಿ ಯಶಸ್ವಿನಿ ಫಲಾನುಭವಿಗಳು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬೇಕಾದಲ್ಲಿ ಆಸ್ಪತ್ರೆಯು ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಬಹುದು. ಆದರೆ ಸದರಿ ಔಷಧೋಪಚಾರ ಚಿಕಿತ್ಸೆಯ ವೆಚ್ಚವನ್ನು ಗ್ರಾಮೀಣ ಸಹಕಾರಿಗಳು ನೇರವಾಗಿ ಆಸ್ಪತ್ರೆಗೆ ಭರಿಸಬೇಕು. ಮತ್ತು ಔಷಧ ವೆಚ್ಚವನ್ನು ಯಶಸ್ವಿನಿ ಫಲಾನುಭವಿಗಳೇ ವಹಿಸಿಕೊಳ್ಳಬೇಕು. ಶಸ್ತ್ರಚಿಕಿತ್ಸೆ ಅವಶ್ಯವಿಲ್ಲದ ಅನಾರೋಗ್ಯದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿದಾಗ ಮಾಡಿದ ಹೊರರೋಗಿ ತಪಾಸಣೆ, ಹೊರ ರೋಗಿಯಾಗಿ ತಂದ ಔಷಧಿಗಳು ಮತ್ತು ಒಳರೋಗಿ ಔಷಧೋಪಚಾರದ ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಭರಿಸುವುದಿಲ್ಲ.

16. ಯಶಸ್ವಿನಿ ಯೋಜನೆಯ ಜಾಲದಲ್ಲಿ ಎಷ್ಟು ಆಸ್ಪತ್ರೆಗಳು ನೋಂದಣಿ ಆಗಿದೆ?

ಈಗ ಇರುವಂತೆ ರಾಜ್ಯದಲ್ಲಿ ಸುಮಾರು 350 ಆಸ್ಪತ್ರೆಗಳು ಗುರುತಿಸಲ್ಪಟ್ಟಿವೆ.

17. ಈ ಯೋಜನೆಯ ಫಲಾನುಭವಿಯಾಗುವುದು ಹೇಗೆ?

ಈ ಯೋಜನೆಯ ಫಲಾನುಭವಿಯಾಗ ಬಯಸುವ ಗ್ರಾಮೀಣ ಸಹಕಾರಿ ಕನಿಷ್ಠ 6 ತಿಂಗಳು ನಿರ್ದಿಷ್ಟಪಡಿಸಿದ ಸಹಕಾರಿ ಸಂಘದ ಸದಸ್ಯ ರಾಗಿದ್ದರೆ, ಆ ಸಂಘದ ಕಾರ್ಯದರ್ಶಿಯಿಂದ ನೋಂದಣಿ ನಮೂನೆ ಪಡೆದು, ಅದನ್ನು ಭರ್ತಿ ಮಾಡಿ, ನಿಗದಿತ ಪ್ರಮಾಣದ ವಂತಿಗೆ ಹಣ ಕೊಟ್ಟು ಇತ್ತೀಚಿನ ಎರಡು ಭಾವಚಿತ್ರಗಳನ್ನು ಕೊಟ್ಟು ಫಲಾನುಭವಿಯಾಗಬಹುದು.

18. ಈ ಯೋಜನೆಯ ಫಲಾನುಭವಿತ್ವವನ್ನು ವರ್ಗಾಯಿಸುವುದಕ್ಕೆ ಅವಕಾಶವಿದೆಯೇ?

ಇಲ್ಲ, ಆರೋಗ್ಯ ಸವಲತ್ತುಗಳನ್ನು ಪಡೆಯಬಯಸುವವರು ಸ್ವತಃ ತಾವೇ ಕಡ್ಡಾಯವಾಗಿ ಯೋಜನೆಯ ಫಲಾನುಭವಿಗಳಾಗಿರಬೇಕು.

19. ಫಲಾನುಭವಿತ್ವ ಬಯಸುವವರು ಪಾವತಿಸಬೇಕಾದ ವಂತಿಕೆ ಎಷ್ಟು?

ಫಲಾನುಭವಿಯಾಗಬಯಸುವ, ಪ್ರತಿಯೊಬ್ಬರೂ ವರ್ಷಕ್ಕೆ ನಿಗದಿತ ಪ್ರಮಾಣದ ವಂತಿಕೆ ಹಣ ನೀಡಬೇಕು.

20. ಫ್ಯಾಮಿಲಿ ಹೆಲ್ತ್ ಪ್ಲಾನ್ ಲಿಮಿಟೆಡ್ (ಎಫ್.ಹೆಚ್.ಪಿ.ಎಲ್.) ಎಂದರೇನು?

ಈ ಸಂಸ್ಥೆಯು ಯೋಜನೆಯಡಿಯಲ್ಲಿ ಥರ್ಡ್ ಪಾರ್ಟಿ ಆಡ್ಮಿನಿಸ್ಟ್ರೇಟರ್ ಆಗಿ ಕಾರ್ಯ ನಿರ್ವಹಿಸುತ್ತದೆ. ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊಂದಿರುತ್ತದೆ.

21. ಈ ಯೋಜನೆಯ ಲಾಭ ಹೇಗೆ ಪಡೆದುಕೊಳ್ಳಬಹುದು?

ಯಶಸ್ವಿನಿ ಫಲಾನುಭವಿಗಳು ಶಸ್ತ್ರಚಿಕಿತ್ಸೆ ಬೇಕಾದಲ್ಲಿ ತಮ್ಮ ಗುರುತಿನ ಚೀಟಿಯೊಂದಿಗೆ ಈ ಯೋಜನೆಯಡಿಯಲ್ಲಿ ಅಂಗೀಕೃತವಾದ ಸಾಧ್ಯವಾದಷ್ಟು ತಮ್ಮ ಜಿಲ್ಲೆಯಲ್ಲಿನ ಆಸ್ಪತ್ರೆಗೆ ಭೇಟಿ ನೀಡಬೇಕು. ಆಸ್ಪತ್ರೆಯ ವೈದ್ಯಾಧಿಕಾರಿಗಳು ಅಂತಹ ಫಲಾನುಭವಿಗಳ ಆರೋಗ್ಯ ತಪಾಸಣೆ ಮಾಡಿ ಶಸ್ತ್ರಚಿಕಿತ್ಸೆ ಅವಶ್ಯ ಕಂಡು ಬಂದಲ್ಲಿ ಮತ್ತು ಸದರಿ ಶಸ್ತ್ರಚಿಕಿತ್ಸೆಯೂ ಯೋಜನೆಯಲ್ಲಿ ಒಳಗೊಂಡಿದ್ದಲ್ಲಿ ವಿವರಗಳೊಂದಿಗೆ ಎಫ್.ಹೆಚ್.ಸಿ.ಎಲ್. ಗೆ ಪೂರ್ವಾನುಮತಿ ಪಡೆಯಲು ಇಂಟರ್‌ನೆಟ್ ಮುಖಾಂತರ ಪ್ರಸ್ತಾವ ಕಳಿಸುವವರು.

ಎಫ್.ಹೆಚ್.ಪಿ.ಎಲ್.ನವರು ಪ್ರಸ್ತಾವವನ್ನು ಪರಿಶೀಲಿಸಿ, ಪೂರ್ವಾನುಮತಿ ನೀಡುವರು. ಈ ಕಾರ್ಯಕ್ಕೆ ಸ್ವಲ್ಪ ಸಮಯ ಬೇಕಾಗುವುದು. ನಿಜವಾದ ಫಲಾನುಭವಿಗಳೆಲ್ಲದವರಿಗೆ ಯೋಜನೆಯ ಲಾಭ ಹೋಗುವುದನ್ನು ತಡೆಯಲು ಇಂಥ ಪರಿಶೀಲನೆ ಅವಶ್ಯ.

22. ಶಸ್ತ್ರಚಿಕಿತ್ಸೆ ಪಡೆದ ಫಲಾನುಭವಿಗಳ ಬಿಲ್ಲಿನ ಪಾವತಿ ಹೇಗೆ ಆಗುತ್ತದೆ.?

ಯಶಸ್ವಿನಿ ಫಲಾನುಭವಿಗಳು, ಆಸ್ಪತ್ರೆಗೆ ಬಿಲ್ಲಿನ ಹಣವನ್ನು ಪಾವತಿ ಮಾಡಬೇಕಾಗಿಲ್ಲ, ಆಸ್ಪತ್ರೆಯವರು ಬಿಲ್ಲನ್ನು ಎಫ್.ಹೆಚ್.ಪಿ.ಎಲ್.ಗೆ ಕಳಿಸುವರು. ಎಫ್.ಹೆಚ್.ಪಿ.ಎಲ್.ನವರು ಬಿಲ್ಲಿನ ಪರಿಶೀಲನೆ ಮಾಡಿ ಅವು ಯೋಜನೆಯ ಪ್ರಕಾರ ಇದ್ದಲ್ಲಿ ಅದನ್ನು ಪಾಸು ಮಾಡಲು ಯಶಸ್ವಿನಿ ಟ್ರಸ್ಟ್‌ಗೆ ಕಳಿಸುವುದು. ಯಶಸ್ವಿನಿ ಟ್ರಸ್ಟ್ ಆಸ್ಪತ್ರೆಗಳ ಬಿಲ್ಲನ್ನು ತನ್ನ ಸಭೆಯಲ್ಲಿ ಮಂಜೂರು ಮಾಡಿ ಬಿಲ್ಲಿನ ಮೊತ್ತವನ್ನು ಎಫ್.ಹೆಚ್.ಪಿ.ಎಲ್. ಖಾತೆಗೆ ವರ್ಗಾಯಿಸುವುದು. ಎಫ್.ಹೆಚ್.ಪಿ.ಎಲ್. ಸಂಬಂಧಿಸಿದ ಆಸ್ಪತ್ರೆಗಳ ಚೆಕ್ / ಡಿ.ಡಿ. ಕಳಿಸುವುದು.

ಒಟ್ಟಿನಲ್ಲಿ "ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಒಬ್ಬನು" ಎಂಬ ಸಹಕಾರ ತತ್ವದ ಆಧಾರದ ಮೇಲೆ ಯಶಸ್ವಿನಿ ಯೋಜನೆ ರೂಪುಗೊಂಡಿದೆ.

ಇನ್ನೂ ನಿಮ್ಮಲ್ಲಿ ಪ್ರಶ್ನೆ / ಸಂದೇಹಗಳಿದ್ದರೆ, ನಿಮ್ಮ ಜಿಲ್ಲೆಯ
ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಯನ್ನು ಸಂಪರ್ಕಿಸಿ
ಚಿಂತೆಯಿಂದ ನರಳುವ ದಿನಗಳು ಇನ್ನಿಲ್ಲ!

ಉತ್ತಮ ವೈದ್ಯಕೀಯ ಸೌಲಭ್ಯ ಈಗ ನಮಗೂ ಲಭ್ಯ
ಪ್ರಕಟಣೆ : ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್

Website : www.yeshasvini.org
Yeshasvini Helpline Nos
080 – 22377905 / 06 / 65966704
Mobile : 94483 78028